ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಸಂಖ್ಯೆ: ಕವಿಪ್ರನಿನಿ/ಬಿ16/9457/2019-20** **ದಿನಾಂಕ: 02.04.2020**

ಮುಖ್ಯ ಇಂಜಿನಿಯರ್(ವಿ),
ಪ್ರಸರಣ ವಲಯ,
ಕವಿಪ್ರನಿನಿ,
ಬೆಂಗಳೂರು/ತುಮಕೂರು/ಮೈಸೂರು/ಹಾಸನ/
ಬಾಗಲಕೋಟೆ/ಗುಲ್ಬರ್ಗಾ/ಎಸ್.ಎಲ್.ಡಿ.ಸಿ.

ಮಾನ್ಯರೆ,

ವಿಷಯ: ಖಾಸಗಿ ಏಜೆನ್ಸಿಗಳಿಂದ ಪಡೆದ ಹೊರಗುತ್ತಿಗೆ ಕಾರ್ಮಿಕರಿಗೆ ಸಂಬಂಧಪಟ್ಟ ಏಜೆನ್ಸಿಗಳಿಂದ ಬಿಲ್ಲನ್ನು ಪಡೆದು ಸಂಭಾವನೆಯನ್ನು ಪಾವತಿಸುವ ಬಗ್ಗೆ.

ಉಲ್ಲೇಖ:
1. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ16/9457/2019-20, ದಿನಾಂಕ: 26.03.2020.
2. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರು ದಿನಾಂಕ: 02.04.2020 ರಂದು ನೀಡಿದ ಮೌಖಿಕ ಆದೇಶ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿಗಮದಲ್ಲಿ ಹಲವಾರು ಸೇವೆಗಳನ್ನು ಖಾಸಗಿ ಏಜೆನ್ಸಿಗಳಿಗೆ ಹೊರಗುತ್ತಿಗೆ ನೀಡಲಾಗಿದ್ದು, ಸದರಿ ಏಜೆನ್ಸಿಗಳಿಂದ ಪಡೆದ ಹೊರಗುತ್ತಿಗೆ ಕಾರ್ಮಿಕರಿಗೆ ಮಾರ್ಚ್-2020 ರ ಸಂಭಾವನೆಯನ್ನು ಸಂಬಂಧಿಸಿದ ಖಾಸಗಿ ಏಜೆನ್ಸಿಯು ಪಾವತಿಸಬೇಕಿರುತ್ತದೆ.

ಖಾಸಗಿ ಏಜೆನ್ಸಿಗಳಿಂದ ಮಾರ್ಚ್-2020 ರ ಬಿಲ್ಲನ್ನು ಪಡೆದು ಹೊರಗುತ್ತಿಗೆ ಕಾರ್ಮಿಕರಿಗೆ ಸಂಭಾವನೆಯನ್ನು ಕೂಡಲೇ ಪಾವತಿಸಲು ಕ್ರಮ ವಹಿಸುವಂತೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರು ಆದೇಶಿಸಿರುತ್ತಾರೆ.

ಮುಂದುವರೆದು ನಿಗಮದ ಉಲ್ಲೇಖ-1 ರ ಸುತ್ತೋಲೆಯಲ್ಲಿ, ನಿಗಮದಲ್ಲಿ ವಿವಿಧ ಏಜೆನ್ಸಿ ಮೂಲಕ ಪಡೆದಿರುವ ಗುತ್ತಿಗೆ ಕಾರ್ಮಿಕರನ್ನು ಲಾಕ್‌ಡೌನ್ ಅವಧಿಯಲ್ಲಿ ಕರ್ತವ್ಯದಲ್ಲಿದ್ದಾರೆಂದು ಸಂಬಂಧಿಸಿದ ಏಜೆನ್ಸಿಯವರು ಪರಿಗಣಿಸಬೇಕಿರುತ್ತದೆ. ಇದಲ್ಲದೆ ಅವರನ್ನು ಕೆಲಸದಿಂದ ವಜಾಗೊಳಿಸಬಾರದು ಹಾಗೂ ಸದರಿಯವರಿಗೆ ಏಜೆನ್ಸಿಯವರು ಯಾವುದೇ ಸಂಭಾವನೆಯನ್ನು ಕಡಿತಗೊಳಿಸದಿರುವ ಬಗ್ಗೆ ಸಂಬಂಧಿಸಿದ ಕಚೇರಿಯ ಮುಖ್ಯಸ್ಥರು ದೃಢಪಡಿಸಿಕೊಳ್ಳುವಂತೆ ನಿರ್ದೇಶನ ನೀಡಲಾಗಿತ್ತು.

ಆದುದರಿಂದ ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ಕಚೇರಿಗಳಲ್ಲಿ ಖಾಸಗಿ ಏಜೆನ್ಸಿಗಳಿಂದ ಹೊರಗುತ್ತಿಗೆ ಮುಖಾಂತರ ಪಡೆದ ಗುತ್ತಿಗೆ ಕಾರ್ಮಿಕರಿಗೆ ಸಂಭಾವನೆಯನ್ನು ಪಾವತಿಸುವ ದೃಷ್ಟಿಯಿಂದ, ಸಂಬಂಧಿಸಿದ ಏಜೆನ್ಸಿಗಳಿಂದ ಕೂಡಲೇ ಬಿಲ್ಲುಗಳನ್ನು ಪಡೆದು, **ದಿನಾಂಕ: 03.04.2020** ರ ಒಳಗೆ ಬಿಲ್ಲನ್ನು ಪಾವತಿಸಲು ಕ್ರಮವಹಿಸುವಂತೆ ಸಂಬಂಧಪಟ್ಟ ಕಚೇರಿಯ ಅಧಿಕಾರಿಗಳಿಗೆ ಸೂಚಿಸುವಂತೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

**ತಮ್ಮ ವಿಶ್ವಾಸಿ,**

2/4/2020

**ಉಪ ಪ್ರಧಾನ ವ್ಯವಸ್ಥಾಪಕರು**
**(ಸಿಬ್ಬಂದಿ)**

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಆರ್ಥಿಕ ಸಲಹೆಗಾರರು (ಲೆಕ್ಕಗಳು ಮತ್ತು ಸಂಪನ್ಮೂಲ) / (ಆಂತರಿಕ ಪರಿಶೋಧನೆ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಪ್ರಸರಣ (ಕಾಮಗಾರಿ ಮತ್ತು ನಿರ್ವಹಣೆ)/(ಕಾಮಗಾರಿ)/(ನಿರ್ವಹಣೆ), ಕವಿಪ್ರನಿನಿ.
3. ಲೆಕ್ಕನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು/ತುಮಕೂರು/ಮೈಸೂರು/ಹಾಸನ/ಬಾಗಲಕೋಟೆ/ಗುಲ್ಬರ್ಗಾ/ಎಸ್.ಎಲ್.ಡಿ.ಸಿ.
4. ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಪ್ರಸರಣ (ಕಾಮಗಾರಿ ಮತ್ತು ನಿರ್ವಹಣೆ)/(ಕಾಮಗಾರಿ)/(ನಿರ್ವಹಣೆ)/(ಆಂತರಿಕ ಪರಿಶೋಧನೆ), ಕವಿಪ್ರನಿನಿ.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸೇವೆಗಳು)/(ಆಡಳಿತ), ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ವ್ಯವಸ್ಥಾಪಕರು (ಆಂತರಿಕ ನಿರ್ವಹಣೆ)/ಲೆಕ್ಕಾಧಿಕಾರಿ(ನಗದು ಮತ್ತು ಲೆಕ್ಕಗಳು), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.